

**ಮನೆಯ ಜಂತೆಗಳಲ್ಲೋ ಕಲ್ಲುಪೊಟರೆಗಳಲ್ಲೋ ವಾಸಿಸುವ ಚೇಳು ತನ್ನ ಕೊಂಡಿಗಳಲ್ಲಿ ಹೊಂದಿರುವ ವಿಷದಿಂದ ಮನುಷ್ಯರನ್ನು ಭಯಗೊಳಿಸುತ್ತದೆ. ಲಕ್ಷಾಂತರ ವರ್ಷಗಳ ಕಾಲಚಕ್ರದಲ್ಲಿ ಹೆಚ್ಚಿನ ಬದಲಾವಣೆಯಿಲ್ಲದೆ ಉಳಿದುಕೊಂಡು ಬಂದಿರುವ ಚೇಳುಗಳು ಜೀವವಿಕಾಸ ಪ್ರಕ್ರಿಯೆಗೇ ಸವಾಲು ಎಸೆದಂತಿವೆ.**

‘ಚೇಳಿಂಗೆ ಬಸುರಾಯಿತ್ತೆ ಕಡೆ! ಬಾಳೆಗೆ ಫಲವಾಯಿತ್ತೆ ಕಡೆ! ರಣರಂಗದಲ್ಲಿ ಕಾದುವ ಓಲೆಕಾರಂಗೆ ಓಸರಿಸಿತ್ತೆ ಕಡೆ! ಮಾಡುವ ಭಕ್ತಂಗೆ ಮನಹೀನವಾದಡೆ ಅದೇ ಕಡೆ ಕೂಡಲಸಂಗಮದೇವಾ’ ಎನ್ನುವ ಬಸವಣ್ಣನವರ ವಚನ ಚೇಳಿನ ಕುರಿತ ಸ್ವಾರಸ್ಯಕರ ಸಂಗತಿಯೊಂದನ್ನು ಸೂಚಿಸುತ್ತದೆ.

ಗಂಡು ಮತ್ತು ಹೆಣ್ಣು ಚೇಳುಗಳು ‘ಫೆರೋಮೋನ್ಸ್’ ಎನ್ನುವ ರಾಸಾಯನಿಕ ಹೊರಸೂಸಿ ತಮ್ಮ ಇರುವಿಕೆಯನ್ನು ಗುರುತಿಸಿಕೊಂಡು ಆಕರ್ಷಣೆಗೊಳ್ಳುತ್ತವೆ. ಮಿಲನ ಕ್ರಿಯೆ ಮುಗಿಯುತ್ತಿದಂತೆ ಗಂಡು ಅಲ್ಲಿಂದ ಕ್ಷಣಾರ್ಧದಲ್ಲಿ ಪಾರಾಗಬೇಕು; ಕೊಂಚ ಮೈಮರೆತರೆ, ಹೆಣ್ಣಿಗೆ ಬಲಿಯಾಗುವುದು ಶತಃಸಿದ್ಧ. ಇದಕ್ಕೆ ‘ಸ್ವಜಾತಿ ಭಕ್ಷಣೆ’ ಎನ್ನುವರು. ಈ ಸಂಗತಿಯನ್ನೇ ಬಸವಣ್ಣನವರು ತಮ್ಮ ವಚನದಲ್ಲಿ ಪ್ರಸ್ತಾಪಿಸಿದ್ದಾರೆ.

ಚೇಳನ್ನು ಕಂಡರೆ ಜನ ಅಂಜುತ್ತಾರೆ. ಅತ್ಯಂತ ಚುರುಕು ಜೀವಿಗಳಾದ ಇವು ಮನೆಯ ಮೂಲೆಯಲ್ಲೆಲ್ಲೋ ಅಡಗಿಕೊಂಡಿರುತ್ತವೆ. ಹಳೆಯ ಮನೆಯ ಮಣ್ಣಿನ ಮಾಡುಗಳಲ್ಲಿ, ಜಂತಿಗಳಲ್ಲಿ ಅಡಗಿ ಕುಳಿತಿರುತ್ತವೆ. ತಿಳಿದೋ ತಿಳಿಯದೆಯೋ ಚೇಳಿನ ಬಳಿಗೆ ಹೋದೆವೆಂದರೆ, ಕ್ಷಣಾರ್ಧದಲ್ಲಿ ಬಾಲದ ಹಿಂದಿರುವ ಕೊಂಡಿಯ ಮುಳ್ಳಿನಿಂದ ಕುಟುಕಿ ವಿಷ ಹರಿಬಿಡುತ್ತವೆ. ಹಾವಿನಷ್ಟು ಮಾರಕವಲ್ಲವಾದರೂ, ಆ ವಿಷ ಕೆಲವೊಮ್ಮೆ ಜೀವಕ್ಕೆ ಸಂಚಕಾರವಾಗುವುದೂ ಉಂಟು.

ಚೇಳಿಗೆ ಕೊಂಡಿಯಲ್ಲಿ ವಿಷವಾದರೆ ಮನುಷ್ಯನಿಗೆ ಮೈಯೆಲ್ಲ ವಿಷ ಎನ್ನುವ ಮಾತನ್ನು ಹಿರಿಯರು ಆಡುತ್ತಾರೆ. ಮಾತಿನಿಂದಲೇ ಕುಟುಕುವವರನ್ನು ಚೇಳು ಎಂದು ಅಡ್ಡಹೆಸರಿನಲ್ಲಿ ಕರೆಯಲಾಗುತ್ತದೆ. ‘ಚೇಳಿಗೆ ಪಾರುಪತ್ಯ ಕೊಟ್ಟರೆ, ಜಾವಕ್ಕೊಂದು ಸರ್ತಿ ಮುಟ್ಟಿಸಿತು’, ‘ಚೇಳಿಗೆ ಮುತ್ತು ಕೊಟ್ಟ ಹಾಗೆ’, ‘ಚೇಳಿನ ಮಂತ್ರ ಬಾರದವನು, ಹಾವಿನ ಬುಟ್ಟೀಲಿ ಕೈ ಹಾಕಿದ’, ‘ಚೇಳಿಗೆ ಕೊಂಡೀಲಿ ವಿಷ, ಹಾವಿಗೆ ಹಲ್ಲಿನಲ್ಲಿ ವಿಷ, ದುಷ್ಟನಿಗೆ ಮೈಯೆಲ್ಲಾ ವಿಷ’ – ಇವು ಚೇಳಿನ ಕುರಿತ ಕೆಲವು ಗಾದೆಗಳು. ಈ ಗಾದೆಗಳು ನಮ್ಮ ಸಾಮಾಜಿಕ ಬದುಕಿನಲ್ಲಿ ಒಂದು ರೂಪಕದ ರೀತಿಯಲ್ಲಿ ಚೇಳು ಪಡೆದುಕೊಂಡಿರುವ ಮಹತ್ವಕ್ಕೆ ಉದಾಹರಣೆಯಂತಿವೆ.

ಕಥೆಗಾರ ವಸುಧೇಂದ್ರ ‘ಚೇಳು’ ಎಂಬ ಸೊಗಸಾದ ಕಥೆ ಬರೆದಿದ್ದಾರೆ. ಬಳ್ಳಾರಿಯಲ್ಲಿ ಚೇಳುಗಳ ಹಾವಳಿ ಜಾಸ್ತಿ. ಮದುವೆಯಾದರೂ ಮಕ್ಕಳಿಲ್ಲದ ವೆಂಕಮ್ಮ ಎನ್ನುವ ಮಹಿಳೆ, ಊರಿಗೆ ಬಂದ ಭೈರವ್ ಬಾಬಾನಿಂದ ಚೇಳಿನ ಮಂತ್ರವನ್ನು ಕಲಿಯುತ್ತಾಳೆ. ಚೇಳಿನ ಕಡಿತಕ್ಕೊಳಗಾದವರ ನೋವನ್ನು ಉಪಶಮನ ಮಾಡುತ್ತಾ ನಿಸ್ವಾರ್ಥವಾಗಿ ಬದುಕುವ ವೆಂಕಮ್ಮ, ಎಲ್ಲರ ನೆಚ್ಚಿನ ‘ಚೇಳಿನ ವೆಂಕಮ್ಮ’ ಆಗುತ್ತಾಳೆ. ಆದರೆ ಕೊಟ್ರೇಶಿ ತಂದ ವಿಷದ ಬಾಟಲಿ ಅವಳ ಸ್ಥಿತಿಯ ಬದಲಾವಣೆಗೆ ಕಾರಣವಾಗುತ್ತದೆ. ವಸುಧೇಂದ್ರರ ಮಾರ್ಮಿಕ ಕಥೆಯನ್ನು ಓದಿಯೇ ಅನುಭವಿಸಬೇಕು.

ಚೇಳು ಕಡಿತಕ್ಕೆ ಜನಪದ ವೈದ್ಯದಲ್ಲಿ ಮಂತ್ರ ಹಾಕುತ್ತಾರೆ. ಶಿಲ್ಪ ಕಲೆಯಲ್ಲೂ ಚೇಳಿಗೆ ಪ್ರಾಶಸ್ತ್ಯವನ್ನು ನೀಡಲಾಗಿದೆ. ಕೆಲವು ದೇವಾಲಯದಲ್ಲಿ ಚೇಳಿನ ಶಿಲ್ಪಕಲೆಯಿದೆ. ಗುಲ್ಬರ್ಗದ ಯಾದಗಿರಿಯ ಕಂದಕೂರ ಎಂಬ ಗ್ರಾಮದಲ್ಲಿ ಬೆಟ್ಟದ ಮೇಲೆ ಚೇಳಿನ ಶಿಲ್ಪಕ್ಕೆ ಗುಡಿಕಟ್ಟಿ ಪೂಜಿಸುತ್ತಿದ್ದಾರೆ. ಅಲ್ಲಿ ನಾಗಪಂಚಮಿಯ ದಿನ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ.

ಚೇಳುಗಳು ಬೆನ್ನು ಮೂಳೆ ಹೊಂದಿರದ ಅಕಶೇರುಕ ವರ್ಗಕ್ಕೆ ಸೇರಿದ ಸಂಧಿಪದಿಯ ಪರಭಕ್ಷಕ ವಿಷ ಜೀವಜಂತುಗಳು. ಚೇಳುಗಳನ್ನು ಎಂಟು ಕಾಲುಗಳುಳ್ಳ ‘ಅರಕ್ನಿಡ್’ ವರ್ಗಕ್ಕೆ ಸೇರಿಸಲಾಗಿದೆ. ಅವುಗಳ ಮುಂದಿರುವ ಇಕ್ಕಳದಂತಹ ವಾಸನೆ ಕಂಡು ಹಿಡಿಯುವ ಜೋಡಿ ನಖಗಳು ಹಾಗೂ ಪಟ್ಟಿಗಳಿರುವ ಸಣ್ಣ ಬಾಲದ ತಿರುವು, ಅದರ ಹಿಂದೆಯೇ ವಿಷದ ಮುಳ್ಳನ್ನು ಹೊಂದಿರುವ ಕೊಂಡಿ ಇದೆ.

ಚೇಳುಗಳಲ್ಲಿ ಹಲವಾರು ವಿಧಗಳಿವೆ. ಅವು ತಮ್ಮ ಆಹಾರವಾಗುವ ಕೀಟ, ಹಲ್ಲಿ, ಕಪ್ಪೆ ಮೊದಲಾದ ಜೀವಿಗಳಿಗೆ ತಮ್ಮ ಬಾಲದ ತುದಿಯಲ್ಲಿರುವ ಕೊಂಡಿಯಿಂದ ಕುಟುಕುತ್ತವೆ. ಆಗ ನಿಸ್ತೇಜಗೊಂಡ ಬೇಟೆಯ ದೇಹದ ದ್ರವಾಹಾರವನ್ನು ಹೀರುತ್ತವೆ. ಆತ್ಮರಕ್ಷಣೆಗೂ ಇದೇ ಕೊಂಡಿಯನ್ನು ಬಳಸುತ್ತವೆ.

ಎಲ್ಲ ರೀತಿಯ ಹವಾಮಾನ ಮತ್ತು ಭೂಪ್ರದೇಶಗಳಲ್ಲಿ ಚೇಳುಗಳು ವಾಸಿಸುತ್ತವೆ. ಕೆಲವು ನೆಲದೊಳಗೆ ವಾಸಿಸಿದರೆ, ಮತ್ತೆ ಕೆಲವು ಮರಗಳನ್ನು ಆಶ್ರಯಿಸುತ್ತವೆ. ಕಲ್ಲುಗಳ ಅಡಿ ಸೇರಲು ಕೆಲವು ಬಯಸಿದರೆ, ಕೆಲ ಚೇಳುಗಳಿಗೆ ಮರಳೇ ಪ್ರಿಯವಾದ ಸ್ಥಾನ. ■

**ಜೀವಂತ ಪಳೆಯುಳಿಕೆ**

ಚೇಳುಗಳು ಭೂಮಿಯ ಮೇಲೆ ಭೌಗೋಳಿಕ ಚಿಹ್ನೆ ಕಾಣಿಸಿದ ‘ಸಿಲುರಿಯನ್’ ಕಾಲದ ಅವಧಿಯಿಂದಲೂ ಅಂದರೆ ಸುಮಾರು 443 ದಶಲಕ್ಷ ವರ್ಷಗಳಿಂದಲೂ ಭೂಮಿಯ ಮೇಲಿವೆ. ವಿಸ್ಮಯದ ಸಂಗತಿಯೆಂದರೆ, ಇಷ್ಟು ದೀರ್ಘ ಅವಧಿಯಲ್ಲಿ ಅವುಗಳ ದೇಹ, ಆಕಾರ, ಸ್ವರೂಪದಲ್ಲಿ ಯಾವುದೇ ಗಮನಾರ್ಹವಾದ ಬಡಲಾವಣೆಯಾಗಿಲ್ಲ. ಹಾಗಾಗಿ ಚೇಳುಗಳನ್ನು ‘ಜೀವಂತ ಪಳೆಯುಳಿಕೆ’ (ಲಿವಿಂಗ್ ಫಾಸಿಲ್) ಎಂದು ಕರೆಯುತ್ತಾರೆ.